ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 22-11-2016

ಭಾರತ ಚುನಾವಣಾ ಆಯೋಗ

# ಮತದಾರರ ಜಾಗೃತಿ: ಮಾಧ್ಯಮ ಪ್ರಶಸ್ತಿಗೆ ನಾಮನಿರ್ದೇಶನ ಆಹ್ವಾನ

ಬೆಂಗಳೂರು, ನವೆಂಬರ್ 22- ಭಾರತ ಚುನಾವಣಾ ಆಯೋಗವು ರಾಷ್ಟ್ರೀಯ ಮತದಾನದ ದಿನದ ಅಂಗವಾಗಿ ಜನವರಿ 25 ರಂದು 2016 ನೇ ಸಾಲಿನ ನ್ಯಾಷನಲ್ ಮೀಡಿಯಾ ಅವಾರ್ಡ್ ನೀಡುವ ಸಲುವಾಗಿ ಮಾಧ್ಯಮ ಸಂಸ್ಥೆಗಳ ಹೆಸರನ್ನು ನಾಮನಿರ್ದೇಶನ ಮಾಡಿ ಕಳುಹಿಸುವಂತೆ ಕೋರಿದ್ದಾರೆ.

ಮತದಾನದ ಪ್ರಾಮುಖ್ಯತೆ ಮತ್ತು ಮತದಾನ ಗುರುತಿನ ಚೀಟಿ ಪಡೆದುಕೊಳ್ಳುವ ಕುರಿತು 2016 ನೇ ಸಾಲಿನಲ್ಲಿ ಮತದಾರರಿಗೆ ಜಾಗೃತಿ ಮೂಡಿಸುವಂತಹ ಸುದ್ದಿಗಳನ್ನು ಪ್ರಕಟಿಸಿದ ಅಥವಾ ಪ್ರಸಾರ ಮಾಡಿದ ಪತ್ರಿಕಾ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ, ಆಕಾಶವಾಣಿ ಮತ್ತು ಆನ್‌ಲೈನ್ ಮೀಡಿಯಾದವರು ಈ ಪ್ರಶಸ್ತಿ ಪಡೆಯಲು ಅರ್ಹರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಭಾರತ ಚುನಾವಣಾ ಆಯೋಗದವರು ಸೂಚಿಸಿರುವಂತೆ ಅಗತ್ಯ ದಾಖಲೆಗಳನ್ನು ನವೆಂಬರ್ 26 ರೊಳಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಸಲ್ಲಿಸಬಹುದು.

ಇಂಗ್ಲೀಷ್ ಮತ್ತು ಹಿಂದಿ ಭಾಷೆಯನ್ನು ಹೊರತುಪಡಿಸಿ ಇತರೆ ಭಾಷೆಯಲ್ಲಿ ಪ್ರಕಟಗೊಂಡಿರುವ ಸುದ್ದಿಗಳನ್ನು ಇಂಗ್ಲೀಷ್ ಭಾಷೆಗೆ ಅನುವಾದಿಸಿ ಕಳುಹಿಸಬೇಕು.

ಈ ಸಂಬಂಧ ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸುವ ಕುರಿತು ಹೆಚ್ಚಿನ ವಿವರಗಳಿಗೆ ಭಾರತ ಚುನಾವಣಾ ಆಯೋಗದ ಸುತ್ತೋಲೆಯ ಪತ್ರವನ್ನು ಇಲಾಖೆಯ ವೆಬ್‌ಸೈಟ್ **www.karnatakavarthe.org** ನಲ್ಲಿ ನೋಡಬಹುದು.

**ಪತ್ರಿಕಾ ಪ್ರಕಟಣೆ**

## ಸ್ಪರ್ಧಾತ್ಮಕ ಪರೀಕ್ಷೆ – ಕೀ ಉತ್ತರ ಪ್ರಕಟ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗ ವಿವಿಧ ಗ್ರೂಪ್ 'ಬಿ' ತಾಂತ್ರಿಕ/ತಾಂತ್ರಿಕೇತರ ಹಾಗೂ ಗ್ರೂಪ್ 'ಸಿ' ತಾಂತ್ರಿಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನಡೆಸಿದ ಪರೀಕ್ಷೆಯ ಕೀ ಉತ್ತರಗಳನ್ನು ಆಯೋಗದ ಅಂತರ್ಜಾಲ "http://kpsc.kar.nic.in/Key Answers" ನಲ್ಲಿ ಪ್ರಕಟಿಸಿದೆ.

ಈ ಕೀ ಉತ್ತರಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಅದನ್ನು ಪುಷ್ಟೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ವಿಷಯ, ಪ್ರಶ್ನೆ ಪುಸ್ತಿಕೆಯ ಶ್ರೇಣಿ, ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಗಳು ಹಾಗೂ ಪ್ರತಿ ಪ್ರಶ್ನೆಗೆ ರೂ 50/– ಶುಲ್ಕದೊಂದಿಗೆ (ಐಪಿಒ/ಡಿಡಿ ಮೂಲಕ) ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಪ್ರಕಟಣೆಯ 7 ದಿನದೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

## ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ತರಬೇತಿ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ಕೃಷಿ ವಿಶ್ವವಿದ್ಯಾನಿಲಯದ ಬೇಕರಿ ತರಬೇತಿ ಕೇಂದ್ರವು ಹದಿನಾಲ್ಕು ವಾರದ ಬೇಕರಿ ಟೆಕ್ನಾಲಜಿ ತರಬೇತಿಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ಅಭ್ಯರ್ಥಿಯು ಕನಿಷ್ಠ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ) ಪಾಸಾಗಿರಬೇಕು. ನಿಗಧಿತ ಫಾರಂಗಳನ್ನು 10/– ರೂ, ಸಂದಾಯಿಸಿ, ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು – 560 024, ಇಲ್ಲಿಂದ ಪಡೆದುಕೊಳ್ಳಬಹುದು ಹಾಗೂ ಭರ್ತಿಮಾಡಿದ ಅರ್ಜಿಯನ್ನು ಹಿಂದಿರುಗಿಸಲು ಕೊನೆಯ ದಿನ ನವೆಂಬರ್ 30 ರ ಮಧ್ಯಾಹ್ನ 12.00 ಗಂಟೆ.

ಹೆಚ್ಚಿನ ಮಾಹಿತಿಗಾಗಿ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ ಇವರನ್ನು ಖುದ್ದಾಗಿ ಅಥವಾ ದೂರವಾಣಿಯ ಸಂಖ್ಯೆ 080 – 23513370 ಮೂಲಕ ಸಂಪರ್ಕಿಸಬಹುದಾಗಿದೆ.

ಜೆಡಿ:ಜಿಪಿಆರ್.

# 14 weeks certificate course in Bakery Technology

Bengaluru, November 22, (Karnataka Information)

Bakery Training Unit, University of Agricultural Sciences, Hebbal, Bengaluru - 560 024 has invited application for 14 weeks certificate course in Bakery Technology.

Minimum qualification required is pass in SSLC/10$^{th}$ Standard. The applications may be obtained from Bakery Training Unit by paying a fee of Rs. 10/- and the completed application may be sent to Co-coordinator, Bakery Training Unit, UAS, Hebbal, Bengaluru – 560 024.

The last date to issue and receive application is on or before 30-11-2016 at 12.00 Noon.

Interested candidates can contact Co-coordinator, Bakery Training Unit, UAS, Hebbal, Bengaluru – 560 024. Personally or through phone 080 – 23513370.

jd/gpr.

# ನವೆಂಬರ್ 25 ರಂದು ರಾಜ್ಯಾದ್ಯಂತ ಮಾಂಸರಹಿತ ದಿನವೆಂದು ಘೋಷಣೆ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ಸೈಂಟ್ ಟಿ.ಎಲ್. ವಾಸ್‌ವಾನಿ ಅವರ ಜನ್ಮದಿನದ ಪ್ರಯುಕ್ತ ನವೆಂಬರ್ 25 ರಂದು ರಾಜ್ಯಾದ್ಯಂತ ಮಾಂಸರಹಿತ ದಿನವೆಂದು ಶಾಶ್ವತವಾಗಿ ಘೋಷಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸೈಂಟ್ ಟಿ.ಎಲ್. ವಾಸ್‌ವಾನಿ ಅವರ ಜನ್ಮ ದಿನವಾದ ನವೆಂಬರ್ 25 ರಂದು ರಾಜ್ಯಾದ್ಯಂತ ಮಾಂಸರಹಿತ ದಿನವೆಂದು ಘೋಷಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಜೆಡಿ:ಜಿಪಿಆರ್.

# ರಂಗೋತ್ಸವ – 2016 ರ "ಸಹಯೋಗ"

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಹಾಗೂ ರಾಷ್ಟ್ರೀಯ ನಾಟಕ ಶಾಲೆ, ಬೆಂಗಳೂರು ಕೇಂದ್ರವು ಈ ವರ್ಷವೂ ರಾಷ್ಟ್ರೀಯ ಪೂರ್ವ–ಉತ್ತರ ರಂಗೋತ್ಸವವನ್ನು ಡಿಸೆಂಬರ್ 2 ರಿಂದ 6 ರವರೆಗೆ ನಗರದ ಗುರುನಾನಕ್ ಭವನದಲ್ಲಿ ಹಮ್ಮಿಕೊಂಡಿದೆ.

ಭಾರತದ ಈಶಾನ್ಯ ರಾಜ್ಯಗಳಿಂದ 5 ರಂಗ ತಂಡಗಳು ಈ ಉತ್ಸವದಲ್ಲಿ ಪಾಲ್ಗೊಳ್ಳಲಿದೆ ಎಂದು ರಾಷ್ಟ್ರೀಯ ನಾಟಕ ಶಾಲೆ, ಬೆಂಗಳೂರು ಕೇಂದ್ರದ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

# ಒಂದು ವರ್ಷದ ಕ್ರಾಫ್ಟ್‌ಕೋರ್ಸು ಟೈಲರಿಂಗ್ ಥಿಯರಿ ಪರೀಕ್ಷೆ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ತಾಂತ್ರಿಕ ಪರೀಕ್ಷಾ ಮಂಡಳಿ ನಡೆಸುವ ಒಂದು ವರ್ಷದ ಕ್ರಾಫ್ಟ್‌ಕೋರ್ಸು ಟೈಲರಿಂಗ್ ಥಿಯರಿ ಪರೀಕ್ಷೆಯು ಡಿಸೆಂಬರ್ 7 ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ನಡೆಯಲಿದೆ.

ಡಿಸೆಂಬರ್ 7 ರ ನಂತರ ಪ್ರಾಯೋಗಿಕ ಪರೀಕ್ಷೆಗಳು ನಡೆಯಲಿದೆ. ವೇಳಾಪಟ್ಟಿಯನ್ನು ಪರೀಕ್ಷಾ ಕೇಂದ್ರದ ಮುಖ್ಯ ಆದೀಕ್ಷಕರು/ಅಧಿಕಾರಿಯವರು ಪ್ರಕಟಿಸಲಿದ್ದು, ಸಂಬಂಧಿಸಿದ ವಿದ್ಯಾರ್ಥಿಗಳು ಪ್ರವೇಶ ಪತ್ರಗಳಿಗೆ ಆಯಾ ಸಂಸ್ಥೆಯ/ಪರೀಕ್ಷಾ ಕೇಂದ್ರಗಳನ್ನು

ಸಂಪರ್ಕಿಸಿ ಪಡೆಯಬಹುದಾಗಿದೆ ಎಂದು ತಾಂತ್ರಿಕ ಪರೀಕ್ಷಾ ಮಂಡಳಿಯ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

# ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸಂಗೀತ ನೃತ್ಯ ಹಾಗೂ ಇತ್ಯಾದಿ ಕಲೆಗಳಲ್ಲಿ ಹೆಚ್ಚಿನ ಸಂಶೋಧನೆ/ಆಧ್ಯಯನ ಮಾಡಲು 2016-17 ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಪರಿಣಿತ ಕಲಾವಿದರು/ತಜ್ಞರಿಂದ ಸಂಶೋಧನೆಗಾಗಿ – ಫೆಲೋಶಿಪ್ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಹಿಂದೆ ಸಾಕಷ್ಟು ಅರ್ಜಿಗಳು ಬಾರದೇ ಇರುವುದರಿಂದ ಮತ್ತೊಮ್ಮೆ ಫೆಲೋಶಿಪ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಶೋಧನಾರ್ಥಿಗಳು ಪದವೀಧರರಾಗಿರಬೇಕು. ವಯೋಮಿತಿ 45 ವರ್ಷ ಮೀರಿರಬಾರದು.

ಆಸಕ್ತರು ಸಂಶೋಧನೆ/ಆಧ್ಯಯನ ನಡೆಸುವ ವಿಷಯದ ಬಗ್ಗೆ ಸುಮಾರು 5-6 ಪುಟಗಳ ಸಾರಲೇಖವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಅಧ್ಯಯನ ಅವಧಿ ಆರು ತಿಂಗಳು. ಅರ್ಹ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಆಯ್ಕೆಯಾದವರಿಗೆ ರೂ 1.00 ಲಕ್ಷ ಸಂಶೋಧನಾ ನೆರವನ್ನು ನೀಡಲಾಗುವುದು. ಆಯ್ಕೆಯಲ್ಲಿ ಅಕಾಡೆಮಿ ತೀರ್ಮಾನವೇ ಅಂತಿಮ.

ಆಸಕ್ತ ಅಭ್ಯರ್ಥಿಗಳು ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಉಚಿತವಾಗಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಅರ್ಜಿಯ ಜೊತೆ ಸೂಚನೆಯ ಪ್ರತಿ ನೀಡಲಾಗಿದೆ. ಅಂಚೆ ಮೂಲಕ ಅರ್ಜಿ ಪಡೆಯಲಿಚ್ಚಿಸುವವರು ರೂ 10.00 (ರೂ ಹತ್ತು) ಗಳು ಮಾತ್ರ) ಸ್ಟಾಂಪ್ ಹಚ್ಚಿದ ಸ್ವವಿಳಾಸವುಳ್ಳ ಲಕೋಟೆಯನ್ನು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ, 2ನೇಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002 ಇಲ್ಲಿಗೆ ಕಳುಹಿಸಿಕೊಡಬೇಕಾಗಿ ಸೂಚಿಸಿದೆ.

ಭರ್ತಿಮಾಡಿದ ಅರ್ಜಿಗಳನ್ನು email:karnatakasangeeta@gmail.com ಕಳುಹಿಸಬಹುದಾಗಿದೆ. ಕೊನೆಯ ದಿನ : 25-11-2016. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದ.

ಜೆಡಿ:ಜಿಪಿಆರ್.

# ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗ ಕರ್ನಾಟಕ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕಿ ಅರಣ್ಯ ಸಂಕ್ಷಣಾಧಿಕಾರಿ ಗ್ರೂಪ್ 'ಎ' ವೃಂದದ ಒಟ್ಟು 25 ಹುದ್ದೆಗಳ ಸಂಬಂಧ ಮುಖ್ಯ ಪರೀಕ್ಷೆಯನ್ನು 2017 ರ ಜನವರಿ 12 ಮತ್ತು 13 ರಂದು ನಡೆಸಲು ನಿರ್ಧರಿಸಲಾಗಿತ್ತು, ಕಾರಣಾಂತರಗಳಿಂದಾಗಿ ಸದರಿ ಪರೀಕ್ಷೆಯನ್ನು ಪರಿಷ್ಕೃತ ವೇಳಾಪಟ್ಟಿಯಂತೆ 2017 ರ ಜನವರಿ 12, 13, 16 ಹಾಗೂ 17 ರಂದು ನಡೆಸಲು ನಿಗದಿಪಡಿಸಲಾಗಿದೆ.

ಪರಿಷ್ಕೃತ ವೇಳಾಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

ಜೆಡಿ:ಜಿಪಿಆರ್.

# ಅವಧಿ ವಿಸ್ತರಣೆ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಸಹಾಯಕ ನಿಯಂತ್ರಕರು (ಗ್ರೂಪ್ – ಎ) ಮತ್ತು ಲೆಕ್ಕಪರಿಶೋಧನಾಧಿಕಾರಿ (ಗ್ರೂಪ್ –ಬಿ) ವೃಂದದ ಒಟ್ಟು 162 ಹುದ್ದೆಗಳ ಮುಖ್ಯ ಪರೀಕ್ಷೆಯ ಸಂಬಂಧ ಅರ್ಹ ಅಭ್ಯರ್ಥಿಗಳು ಅನ್‌ಲೈನ್‌ನಲ್ಲಿ ಅರ್ಜಿ ಭರ್ತಿಮಾಡಲು ನವೆಂಬರ್ 30 ಹಾಗೂ ಶುಲ್ಕ ಪಾವತಿಸಲು ಡಿಸೆಂಬರ್ 1 ರವರೆಗೆ ವಿಸ್ತರಿಸಲಾಗಿದೆ.

ಮುಖ್ಯ ಪರೀಕ್ಷೆಯ ಅರ್ಜಿಗೆ ಲಾಗ್‌ಇನ್ ಆಗಲು ಅವಶ್ಯವಿರುವ ವಿವರಗಳನ್ನು ಪೂರ್ವಭಾವಿ ಪರೀಕ್ಷೆಯ ಅರ್ಜಿಯಲ್ಲಿ ನೀಡಲಾದ ನೋಂದಾಯಿತಿ ಇ–ಮೇಲ್ (ಮಿಂಚಂಚೆ) ಐ.ಡಿ.ಗೆ ಆಯೋಗವು ಈಗಾಗಲೇ ರವಾನಿಸಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.